ಶ್ರೀ ಅಬ್ದೀಜ್ ಸೇಟ್ (ನರಸಿಂಹರಾಜ).—ತಾವು ಗೌರ್ನಮೆಂಟ್ ಪಜೆಂಟರು. ಅದಕ್ಕೇ ಆ ರೀತಿ ಹೇಳುತ್ತಿರಿ. ಈ ಸರ್ಕಾರಕ್ಕೆ ಒಂದು ನೀತಿ ಇಲ್ಲ, ರೀತಿ ಇಲ್ಲ, ಹೇಳಿದಂತೆ ನಡೆದುಕೊಳ್ಳುವುದಿಲ್ಲ. * * * *

†ಶ್ರೀ ಹೆಚ್. ವಿ. ಕಾಜಲಗಿ (ಕಂದಾಯ ಶಾಖೆಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರುಗಳು ಇಲ್ಲಿ ಕೆಲವು ತಕರಾರುಗಳು ಕಂದಾಯದ ವಸೂಲಿ ಕ್ರಮದಲ್ಲಿ ಆಗಿರುವುದರ ಬಗ್ಗೆ ಹೇಳಿದ್ದಾರೆ. ಹಿಂದೆ ಇದೇ ಮಾನ್ಯ ಸಭೆಯಲ್ಲಿ ಸರಕಾರ ಏನು ಒಂದು ಅಂಡರ್‌ಟೇಕಿಂಗ್ ತೆಗೆದುಕೊಂಡು ಇಲ್ಲಿ ಹೇಳಿಕೆ ಕೊಟ್ಟಿವೋ ಅದೇ ದಿನವೇ ಎಲ್ಲ ಡೆಪ್ಯೂಟಿ ಕಮಿಷನರುಗಳ ಕಡೆಗೆ ವೈರ್‌ಲೆಸ್ ಮೂಲಕ ಹಾಗೂ ಟೆಲಿಗ್ರಾಂಗಳ ಮೂಲಕ ಸ್ಪಷ್ಟವಾದ ಸೂಚನೆಗಳನ್ನು ಕಳುಹಿಸಲಾಗಿದೆ. ಅಲ್ಲದೆ ಅಲ್ಲಿ ರುವ ಅವರ ಕೆಳಗಿನ ಅಧಿಕಾರಿಗಳಾದ ಅಮಲ್ದಾರರುಗಳು ವಸೂಲು ಮಾಡುವುದನ್ನು ತಡೆ ಹಿಡಿಯಬೇಕು ಎಂದು ಹೇಳಲಾಗಿದೆ. ನಿಯಮಕ್ಕೆ ವಿರೋಧವಾಗಿ ಯಾವ ಉಗ್ರ ಕ್ರಮಗಳನ್ನು ತೆಗೆದುಕೊಳ್ಳಕೂಡದು ಎಂದು ಸ್ಪಷ್ಟವಾಗಿ ತಿಳಿಸಲಾಗಿದೆ. ನಾವು ಬರೆದ ಕಾಗದಕ್ಕೆ ಉತ್ತರವಾಗಿ ನಾವು ಕೊಟ್ಟ ಸೂಚನೆಯನ್ನು ಅಕ್ಷರಶಃ ಪಾಲಿಸಿ ಇಂತಿಂತಹ ಕ್ರಮಗಳನ್ನು ತೆಗೆದು ಕೊಳ್ಳಲಾಗಿದೆ ಎಂದು ಅವರು ಪತ್ರಗಳನ್ನು ಬರೆದಿದ್ದಾರೆ. ನಮಗೆ ಬಂದಿರುವ ಎಲ್ಲ ಕಾಗದ ಪತ್ರಗಳನ್ನೂ ಈ ಸಭೆಯ ಮುಂದೆ ಇಡುತ್ತೇನೆ. ಪ್ರತ್ಯೇಕವಾಗಿ ಅದನ್ನು ನೋಡಿಕೊಂಡು ಮಾನ್ಯ ಸದಸ್ಯರು ಇದರಲ್ಲೇನಾದರೂ ದೋಷಗಳಿವೆ ಎಂದು ತಿಳಿಸಿದರೆ ಅವನ್ನು ತಿದ್ದಿಕೊಳ್ಳುತ್ತೇವೆ. ನಾವು ಹೇಳಿಕೆ ಕೊಟ್ಟ ನಂತರ ಎಲ್ಲ ಕಡೆಯೂ ನಮ್ಮ ಸೂಚನೆಯಂತೆ ಅಮಲದಾರರುಗಳು ನಡೆದುಕೊಂಡಿರಬಹುದು. ಆದರೆ ಕೆಲವು ಕಡೆ ಇನ್ನೂ ಹಾಗೆ ಮಾಡದೇ ಇರಬಹುದು. ಆದರೆ ಅಲ್ಲಿ ಎಮ್ಮೆ ಇತ್ಯಾದಿಗಳನ್ನು ವಶಪಡಿಸಿಕೊಂಡರು ಎನ್ನುವುದಕ್ಕೆ ನಮಗೆ ಯಾವ ವರದಿಯೂ ಬಂದಿಲ್ಲ. ರ್ಯಾಂಡರೆವೆನ್ಯೂ ಅಲ್ಲದೆ ಇತರ ವಿವಾದ ಟ್ಯಾಕ್ಸ್‌ಗಳ ವಸೂಲಿ ಕೂಡ ಬರುತ್ತದೆ. ಇವನ್ನು ವಸೂಲು ಮಾಡುವಾಗಲೂ ಜನಗಳಿಗೆ ತ್ರಾಸಾಗದಂತೆ ಮಾಡಬೇಕು ಎಂದು ಸ್ಪಷ್ಟವಾದ ಸೂಚನೆಗಳನ್ನು ಕೊಡಲಾಗಿದೆ. ಇವಿಷ್ಟು ವಿಚಾರಗಳನ್ನು ಮಾನ್ಯ ಸದಸ್ಯರ ಗಮನಕ್ಕೆ ಬರಲಿ ಎಂದು ಇಷ್ಟು ಹೇಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್.—ನನ್ನ ನಿಲುವಳಿ ಸೂಚನೆ ಏನಾಯಿತು ?

ಅಧ್ಯಕ್ಷರು.—ಅದಕ್ಕೆ ನಾನು ಒಪ್ಪಿಗೆ ಕೊಟ್ಟಿಲ್ಲ.

ಶ್ರೀ ವಾಟಾಳ್ ನಾಗರಾಜ್.—ಇನ್ನೊಂದು ಪ್ರಾಮುಖ್ಯವಾದ ಪ್ರಶ್ನೆ ಇಂದು ಇರುವ ಪ್ರಜಾವಾಣಿಯಲ್ಲಿ ಬಂದಿದೆ. ಅದು ನಮ್ಮ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ವೀರೇಂದ್ರ ಪಾಟೀಲರ ರಾಜೀನಾಮೆ ಎಂದು. ಸ್ವಾಮಿ, ಮೊನ್ನೆ ನಾವು ಶ್ರೀ ಶೈಲಕ್ಕೆ ಹೋಗಿದ್ದಾಗ ಇದು ನಡೆದದ್ದು. ರಾಜ್ಯದ ಮುಖ್ಯಮಂತ್ರಿಗಳ ಒಬ್ಬರ ರಾಜೀನಾಮೆ ಅದನ್ನು ಅಷ್ಟು ಲಘುವಾಗಿ ಪರಿಗಣಿಸಬೇಡಿ.

ಅಧ್ಯಕ್ಷರು.—ತಾವು ಬರೆದುಕೊಡಿ.

ಶ್ರೀ ವಾಟಾಳ್ ನಾಗರಾಜ್.—ಅದು ಬರೆದುಕೊಡುವ ವಿಷಯವಲ್ಲ.

ಅಧ್ಯಕ್ಷರು.—ಅದಕ್ಕೆಲ್ಲಾ ಪ್ರೊಸೀಜರ್ ಇದೆ. ಏನು ಇದ್ದರೂ ಅದನ್ನು ಬರೆದುಕೊಡಬೇಕು

Retention of Matters ordered to be expunged

ಶ್ರೀ ಎಚ್. ಎನ್. ನಂಜೇಗೌಡ.—ಈವೊತ್ತು ಬಿಲ್ ಮೇಲೆ ಮಾತನಾಡಬೇಕಾದರೆ ಭಯವಾಗುತ್ತದೆ. ಇದನ್ನು ತಮ್ಮ ಅವಗಾಹನೆಗೆ ತರದೇ ನಾವು ಯಾರಿಗೆ ಹೇಳೋಣ ? ನಾನು ಏನು ಹೇಳಿದೆ ಅದನ್ನು ಇಲ್ಲಿ ಓದುತ್ತೇನೆ. ಅದು ಅಫಿಷಿಯಲ್ ರಿಪೋರ್ಟ್. ನಾನು ಬಿಲ್‌ಮೇಲೆ ಮಾತನಾಡತಕ್ಕಂಥ ಕಾಲದಲ್ಲಿ ಈ ರೀತಿ ಹೇಳಿದೆ : " Advice of the High Court means normally that the High Court would have mentioned this point in the course of a judgement in a particular case. If it is not so, we have to take it that there must be some correspondence between the Government and the High Court on this point which gives room for some doubt in

**** Matter not recorded as ordered by the Chair.

(ಶ್ರೀ ಎಚ್. ಎನ್. ನಂಜೇಗೌಡ)

our mind ". ಏಕೆಂದರೆ ಸ್ಟೇಟ್‌ಮೆಂಟ್ ಆಫ್ ಆಬ್ಜೆಕ್ಟ್ಸ್ ಮತ್ತು ರೀಸನ್ಸ್‌ನಲ್ಲಿ ಹೈಕೋರ್ಟ್ ಮೆನ್‌ಷನ್ ಮಾಡಿವ್ವಾರೆ. ಅದನ್ನು ಅವರು ಕಾರಣಿನಬಾರದಾಗಿತ್ತು ಎಂದು ಹೇಳಿದೆ. ಅದನ್ನು ಎಕ್ಸ್‌ಪಂಜ್ ಮಾಡಬೇಕು ಎಂದು ಹೇಳಿದರು. 315 ರೂಲ್ ಪ್ರಕಾರ ಈ ರೀತಿ ಇದೆ :

"315: If the Speaker is of opinion that a word or words has or have been used in debate which is or are defamatory or indecent, or unparliamentary or undignified, he may in his discretion, order that such word or words be expunged from the proceedings of the Assembly"

This also implies that we must be heard before expunging such words. ನಮ್ಮ ಮನಸ್ಸಿನಲ್ಲಿ ಇರುವುದನ್ನು ರಿಸರ್ವೇಷನ್ ಇಲ್ಲದೆ ಹೇಳಬೇಕಾಗುತ್ತದೆ. ಹಾಗೆ ಹೇಳುವಾಗ ಪ್ರತಿಯೊಂದು ವಾತಿಗೂ ಎಕ್ಸ್‌ಪೆಂಜ್, ಎಕ್ಸ್‌ಪಂಜ್ ಎಂದು ಹೇಳುವುದಾದರೆ ನಾವು ಹೇಳುವುದನ್ನೇ ತಡೆಹಿಡಿದ ಹಾಗಾಗುತ್ತದೆ. ಆದುದರಿಂದ ಇದನ್ನು ಪುನರ್‌ಪರಿಶೀಲಿಸಿ ಉಪಸಭಾಧ್ಯಕ್ಷರು ಏನು ಒಂದು ತೀರ್ಮಾನ ಕೊಟ್ಟರು ಅದನ್ನು ವಾಪಸ್ಸು ತೆಗೆದುಕೊಳ್ಳಬೇಕು ಎಂದು ಹೇಳುತ್ತೇನೆ. It must go on record. That is my pleading. I humbly submit that you may be pleased to consider my request and order accordingly.

Mr. SPEAKER.—I wish to inform the hon. Member that when a presiding officer has given a ruling, it amounts to his decision and I cannot therefore sit in judgement over what has been done by him. I am sorry I cannot do anything as requested by the hon. Member.

ಶ್ರೀ ಎಚ್. ಬಿ. ಹ್ಯಾಲನಯ್ಯ (ಹಾಸನ).—ಛೇರ್ಮನ್ ಆಗಲಿ, ವೈಸ್ ಛೇರ್ಮನ್ ಆಗಲಿ ಯಾರು ಕೊಟ್ಟರು ಅವರೇ ಬಂದು ಈ ರಿವೈಜ್ ಮಾಡಬೇಕು ಎಂದರೆ ಅವರನ್ನು ವೈಟ್ ಮಾಡುವುದು ಯಾವ ನ್ಯಾಯ ? ನಿನ್ನೆ ದಿವಸ ಡೆಪ್ಯೂಟೀ ಸ್ಪೀಕರ್‌ರವರೇ ರೀಕನ್ಸಿಡರ್ ಮಾಡುತ್ತೇವೆಂದು ಒಪ್ಪಿಕೊಂಡಿದ್ದಾರೆ.

Mr. SPEAKER.—If another occasion arises, I shall consider. I cannot interfere with what he has done. I have only said that I cannot sit in judgement over what he has done.

Papers laid on the Table

Mr. SPEAKER.—Now Papers to be laid on the Table.

Sri K. PUTTASWAMY.—Sir, on behalf of the Chief Minister I beg to lay on the Table the Annual Financial Statement of the Mysore State Electricity Board for the year 1969-70, as required under Section 61 of the Electricity (Supply) Act, 1948.

On behalf of the Minister for Finance, Planning and Youth Welfare, I also lay the Finance Accounts, 1967-68, Apporpriation Accounts, 1967-68 and Audit Report 1969 of the Government of Mysore, as required by Article 151 (2) of the Constitution of India.

Sri M. NAGAPPA.—Sir, the Papers now laid on the Table ought to have been supplied to the hon. Members long before so that audit reports, accounts, etc., could be helpful at the time of consideration of